ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಬೀಚನಹಳ್ಳಿಯ ಕರೀಗೌಡರು, ಬೆಂಗಳೂರು ಹಾಗೂ ಹಂಪಿ ವಿ.ವಿ.ಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಈಗ ನಿವೃತ್ತರು. ಕಥೆ, ಕವಿತೆ, ಕಾದಂಬರಿ ಸೇರಿದಂತೆ ವಿವಿಧ ಪ್ರಕಾರಗಳಲ್ಲಿ ಕರೀಗೌಡರ ಅಭಿವ್ಯಕ್ತಿ ಪ್ರಕಟಗೊಂಡಿದೆ. 'ಕರಿಮಣ್ಣಿನ ಗೊಂಬೆಗಳು', 'ಸಂಜೀವಿನಿ ಮರ', 'ಜಾತ್ರೆಗಳು', 'ತೇಜಸ್ವಿ ಕಥೆಗಳ ಅಧ್ಯಯನ', 'ಮಳೆ ಕೋಗಿಲೆ', 'ಕಥನ ಕಲೆಯ ನೆಲೆಗಳು', 'ಕಥೆ ಮತ್ತು ಹಾಡು' ಅವರ ಕೆಲವು ಕೃತಿಗಳು.

ನೀನು ಹೋಗಿ ಅಲ್ಲಿ ಸ್ವಲ್ಪ ದಿನ ಇದ್ದು ಬಾ' ಅಂಥ ಹೇಳಿ ಅಕ್ಕನ ಜೊತೆ ನನ್ನನ್ನು ಕಳುಹಿಸಿಕೊಟ್ಟಳು. ಆದರೆ, ಈಗ ಇಲ್ಲಿ ನೋಡಿದರೆ ಮಾವನಿಗೆ ಏನೂ ಕಾಯಿಲೆ ಇದ್ದಂತೆ ಕಾಣುತ್ತಿಲ್ಲ. ನಾನು ಬಂದಾಗಿನಿಂದಲೂ ನೋಡುತ್ತಿದ್ದೇನೆ. ಅವರು ಗೆಲುವಾಗಿಯೇ ಮನೆ ಒಳಗೆ, ಹೊರಗೆ ಎಲ್ಲ ಥರದ ತಮ್ಮ ಕೆಲಸಗಳನ್ನು ಓಡಾಡಿಕೊಂಡು ಮಾಡ್ತಾನೇ ಇದ್ದಾರೆ.

ಆದರೆ, ಅಕ್ಕ ನಮ್ಮೂರಿನಿಂದ ಬಂದವಳು ಹಾಸಿಗೆ ಹಿಡಿದು ಮಲಗಿ ತಿಂಗಳು ಮೇಲಾಯ್ತು. ಮಾವನನ್ನು ಕೇಳಿದ್ದಕ್ಕೆ, 'ನಿಮ್ಮಕ್ಕನಿಗೆ ಕಳೆದ ಒಂದು ವರ್ಷದಿಂದ ಉಷಾರಿಲ್ಲ ಕಣವ್ವ! ಅವಳು ತಿಂಗಳಿಗೆ ಏಳೆಂಟು ದಿನ ಹಾಸಿಗೆ ಹಿಡಿದು ಮಲಗಿ ಬಿಡ್ತಾಳೆ. ಅವಳಿಗೆ ನಾನೇ ಬಿಸಿ ನೀರು, ಬಿಸಿ ಅಂಬಲಿ ಅಂಥ ನನಗೆ ಬಂದಂಗೆ ಮಾಡಿಕೊಟ್ಟು ಸಾಕಾಗಿದೆ. ಕೊನೆಗೆ ಅವಳೇ ನಿಮ್ಮೂರಿಗೆ ಬಂದು 'ನನ್ನ ತಂಗಿಯ ಕರ್‍ಕೊಂಡು ಬರ್‍ತೀನಿ, ಅವಳಾದ್ರು ನಾಲ್ಕುದಿನ ನನಗೆ ಬಿಸಿನೀರು, ಬಿಸಿ ಊಟ ಅಂಥ ಮಾಡಿಕೊಟ್ಟು ಮನೆ ನಿಗಾ ನೋಡಿಕೊಳ್ಳಲಿ' ಅಂಥ ನನಗೆ ಹೇಳಿ ಬಂದಿದ್ದಳು. 'ನೀನು ನಮ್ಮ ಮನೆಗೆ ಮತ್ತೆ ಬಂದದ್ದು ದೇವತೆ ಬಂದಂಗಾಯ್ತು!' ಎಂದು ಮಾವ ನನ್ನನ್ನು ಬಾಯಿ ತುಂಬಾ ಹೊಗಳಿದರು. 'ನಮ್ಮಕ್ಕನ್ನ ಈ ವಯಸ್ಸಿನಲ್ಲಿ ನೋಡಿಕೊಳ್ಳೋರು ಇನ್ನು ಯಾರಿದ್ದಾರವ್ವ?' ಅಂಥ ಮಾವ ಕೊನೆಯಲ್ಲಿ ಹೇಳಿದ ಮಾತು ನನ್ನ ಎದೆಗೆ ನಾಟಿ ಹೋಗಿತ್ತು.

ಮಾವನಿಗೆ ಮೂರು ಎಕರೆ ಹೊಲ, ಕೆರೆಹಿಂದೆ ಎರಡು ಎಕರೆ ಗದ್ದೆ ಇತ್ತು. ಪ್ರತಿವರ್ಷ ವ್ಯವಸಾಯ ಮಾಡಿಸುತ್ತಿದ್ದರಿಂದ ಮನೆಗೆ ಯಾವ ಬಡತನ ಇರಲಿಲ್ಲ. ಮನೆಯಲ್ಲಿ ನಾನಿದ್ದ ಕಾಲದಲ್ಲಿದ್ದ ಆಡು, ದನಗಳೆಲ್ಲವನ್ನೂ ನಿಭಾಯಿಸುತ್ತಿದ್ದೆ. ಆದರೆ, ಈಗ ಮಾವ ಅವುಗಳನ್ನು ಮಾರಿ ಮನೆಗೆ ಮಜ್ಜಿಗೆ ಮೊಸರಿಗೆ ಇರಲಿ ಅಂಥ ಒಂದು ಕರಾವಿನ ಹಸುವನ್ನು ಮಾತ್ರ ಉಳಿಸಿಕೊಂಡಿದ್ದರು. ಆಗಾಗ ಆ ಹಸುವನ್ನು ಅಡ್ಡಾಡಿಸಲು ಮಾವನೇ ಹೊಲದ ಹತ್ತಿರ ಅದನ್ನು ಹೊಡೆದೊಯ್ಯುತ್ತಿದ್ದರು. ಉಳಿದಂತೆ ಅದನ್ನು ಮನೆಯಲ್ಲೇ ಕಟ್ಟಿ ಹುಲ್ಲು ಹಾಕುತ್ತಿದ್ದರು. ಅದರ ಕರು ಹೋರಿಗರುವಾಗಿದ್ದರಿಂದ ಅದೂ ಆಗಲೇ ದೃಢವಾಗಿತ್ತು. ಹಾಸಿಗೆ ಹಿಡಿದು ಮಲಗಿದ್ದ ಅಕ್ಕನಿಗೆ ನಾನು ಹಗಲು ರಾತ್ರಿ ಸೇವೆ ಮಾಡುವ ಕೆಲಸದಲ್ಲೇ ನಿಂತೆ. ಮಾವನೂ ಅದಕ್ಕೆ ಸಹಕರಿಸುತ್ತಿದ್ದರು. ಅಕ್ಕನನ್ನು ಅವರು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಅವರು ನನ್ನನ್ನೇ ತಮ್ಮ ಮಗಳೆಂಬಂತೆ ಪ್ರೀತಿಸುತ್ತಿದ್ದರಿಂದ, ತಮಗೆ ಮಕ್ಕಳಿಲ್ಲ ಎಂಬ ಕೊರಗನ್ನು ಎಂದೂ ತೋರಿಸಿಕೊಂಡಿದ್ದು ನನಗೆ ನೆನಪೇ ಇಲ್ಲ. ಆದರೆ, ನನ್ನ ಬದುಕು ಮಧ್ಯದಲ್ಲಿ ದುರಂತವಾದುದರ ಬಗ್ಗೆ ಅವರಿಗೆ ನೋವಿತ್ತು. ಮಾವನಿಗೆ ಈಗ ಅಕ್ಕನ ಚಿಂತೆ ಮತ್ತು ನನ್ನ ಚಿಂತೆ ಎರಡೂ ಸೇರಿಕೊಂಡಂತೆ ಕಾಣುತ್ತಿತ್ತು.

ಅಕ್ಕನ ಕಾಯಿಲೆ ದಿನೇ ದಿನೇ ಉಲ್ಬಣಿಸುತ್ತಲೇ ಹೋಯಿತು. ಕಾಲುಮಂಡಿಗಳು ನೋವು ಬಂದು ಎದ್ದು ಓಡಾಡಲಾರದ ಸ್ಥಿತಿಗೆ ಮುಟ್ಟಿದಳು. ಮಾವ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗೆ ಸಿದ್ದೇಗೌಡರ ಗಾಡಿ ಕಟ್ಟಿಸಿಕೊಂಡು ಹೋಗಿ ಅಲ್ಲಿನ ವೈದ್ಯರಿಗೆ ತೋರಿಸಿ ಬಂದರು. ವೈದ್ಯರು ಅಕ್ಕನಿಗೆ ಮಂಡಿಗಳು ಸವೆದಿವೆ ಎಂದು ಹೇಳಿ ಅದಕ್ಕೆ ಎಕ್ಸ್‌ರೇ ಮಾಡಿಸಿ ನೋಡಿ, ಅದಕ್ಕೆ ಆಪರೇಷನ್ ಆಗಬೇಕೆಂದು ಸಲಹೆ ಮಾಡಿದರು. ವೈದ್ಯರು ಆಪರೇಷನ್ ಅಂದದ್ದಕ್ಕೆ ಅಕ್ಕ ಬೆಚ್ಚಿ 'ತಾನು ಹಾಗೇ ಸತ್ತರೂ ಪರವಾಗಿಲ್ಲ, ಆಪರೇಷನ್ ಬೇಡ' ಎಂದು ಹಟ ಮಾಡಿದಳು. ಕೊನೆಗೆ ಅದಕ್ಕೆ ವೈದ್ಯರು ಕೊಟ್ಟಿದ್ದ ಮುಲಾಮು ಹಚ್ಚಿಕೊಂಡು, ಮಾತ್ರೆಗಳನ್ನು ನುಂಗಿಕೊಂಡು ಮನೆಯಲ್ಲೇ ಮಲಗಿಬಿಟ್ಟಳು. ಅಕ್ಕನ ಶರೀರ ದಿನೇದಿನೇ ಕುಗ್ಗುತ್ತಾ ನಡೆದಿತ್ತು. ಮಾವ